

ಚಿತ್ರ: 'ಇನ್‌ಸಿರಿಯೇಟೆಡ್'
ನಿರ್ದೇಶನ: ಫಿಲಿಫ್ ವ್ಯಾನ್ ಲಿಯು
ಭಾಷೆ: ಅರೆಬಿಕ್
ದೇಶ: ಸಿರಿಯಾ
ಅವಧಿ: 85 ನಿಮಿಷ

ಅತ್ಯಾಚಾರ ಎಸಗಿ ಅಲ್ಲಿಂದ ಹೊರಬೀಳುತ್ತಾನೆ. ಯಾರ್ಝುನ್ ಹಲಿಮಾಳನ್ನು ಸಂತೈಸುತ್ತಾಳೆ. ಅವಳ ಗಂಡ ಹೊರಗೆ ಬಿದ್ದಿರುವ ಸಂಗತಿ ಹೇಳುತ್ತಾಳೆ. ನಂತರ ಮನೆಯಿಂದ ಹೊರಬಂದು ನೋಡಿದರೆ ಅವನಿನ್ನೂ ಬದುಕಿದ್ದಾನೆ! ತೀವ್ರ ರಕ್ತಸ್ರಾವದಿಂದ ಬಳಲಿದ್ದಾನೆ. ಅವನನ್ನು ಮನೆಯೊಳಕ್ಕೆ ತಂದು ಕೊನೆಗೆ ಆಸ್ಪತ್ರೆಗೆ ಕಳುಹಿಸುತ್ತಾರೆ. ಮಧ್ಯರಾತ್ರಿ ಅವನು ಮೃತಪಟ್ಟ ಸುದ್ದಿ ಬರುತ್ತದೆ. ಯಾರ್ಝುನ್‌ಳ ಮಕ್ಕಳನ್ನು ರಕ್ಷಿಸಲು ಹೋಗಿ ಹಲಿಮಾ ತನ್ನ ಬದುಕನ್ನು ನಾಶ ಮಾಡಿಕೊಳ್ಳುತ್ತಾಳೆ. ಗಂಡ ಗಾಯಗೊಂಡ ಸಂಗತಿ ಮುಚ್ಚಿಟ್ಟ ಯಾರ್ಝುನ್‌ಳ ವರ್ತನೆಗೆ ಕೋಪಗೊಳ್ಳುತ್ತಾಳೆ. ಯಾರ್ಝುನ್ ಮತ್ತವಳ ಮಕ್ಕಳು ಅಪರಾಧಿ ಭಾವದಿಂದ ತಲೆ ತಗ್ಗಿಸುತ್ತಾರೆ.

ಒಂಬತ್ತು ಜನರು ಕೆಲ ಗಂಟೆಗಳ ಕಾಲ ಅನುಭವಿಸುವ ಮಾನಸಿಕ ಯಾತನೆ, ಭಯ, ಒತ್ತಡಗಳು ನಟನೆಯಾದರೂ ಅವು ನೈಜ ಸನ್ನಿವೇಶಗಳೇನೊ ಎಂಬಂತೆ ಪ್ರೇಕ್ಷಕರಿಗೆ ಭಾಸವಾಗುತ್ತವೆ. ಚಿತ್ರ ಒಂದು ಕುಟುಂಬದ ನೋವಿನ ಸಂಗತಿಗಳನ್ನು ಕಟ್ಟಿಕೊಟ್ಟರೂ ಡಮಾಸ್ಕಸ್ ಕಳೆದ ಆರೇಳು ವರ್ಷಗಳಲ್ಲಿ ಇಂತಹ ಸಾವಿರಾರು ಘಟನೆಗಳಿಗೆ ಸಾಕ್ಷಿಯಾಗಿದೆ. ನಾಲ್ಕು ಗೋಡೆಗಳ ನಡುವೆ ಕುಟುಂಬವೊಂದು ಅನುಭವಿಸುವ ಯಾತನೆಯ ಸನ್ನಿವೇಶಗಳನ್ನು ನಿರ್ದೇಶಕ ಫಿಲಿಫ್ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಯಾರ್ಝುನ್ ಮತ್ತು ಹಲಿಮಾ ಪಾತ್ರಗಳಲ್ಲಿ ನಟಿಯರಾದ ಹಿಯಾಮ್ ಅಬ್ಬಾಸ್ ಹಾಗೂ ಡೈಮಂಡ್ ಅಬೌಡ್ ಭಯ, ಆತಂಕಗಳನ್ನು ಖುದ್ದು ಅನುಭವಿಸಿದಂತೆ ನಟಿಸಿದ್ದಾರೆ.

ಸಿನಿಮಾದ ತಾಂತ್ರಿಕತೆ ಬಗ್ಗೆ ಹೇಳುವಂತದ್ದೇನೂ ಇಲ್ಲ. ಒಟ್ಟಾರೆ ಸಿನಿಮಾ ನೋಡುಗರನ್ನು ಹಿಡಿದಿಟ್ಟುಕೊಳ್ಳುತ್ತದೆ. ಅದೇ ಚಿತ್ರದ ಯಶಸ್ಸಿನ ಗುಟ್ಟು.